ಇ) *ಈಗಾಗಲೇ ಸರ್ಕಾರದ ಈ ಪ್ರದೇಶದಲ್ಲಿ ಎಪಿಡಮಿಕ್ ಪ್ರದೇಶವೆಂದು ಘೋಷಣೆ ಮಾಡಿದೆಯೇ?*

ಈ) *ಕೇಂದ್ರ ಸರ್ಕಾರಕ್ಕೆ ಎಂಡೋಮಿಕ್ ಪ್ರದೇಶವೆಂದು ಸೇರ್ಪಡೆ ಮಾಡಲು ಸರ್ಕಾರದವರು ಶಿಫಾರಸ್ಸು ಮಾಡಲು ಪರಿಶೀಲಿಸುವರೇ?*

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ಹೌದು.

ಆ) ಪ್ರಸಕ್ತ 1995-96ನೇ ಸಾಲಿನ ಮುಂಗಾರಿನಲ್ಲಿ 1896 ಹೆ. ಪ್ರದೇಶದಲ್ಲಿ ಕಂಬಳಿ ಹುಳುವಿನ ಹಾವಳಿ ಕಂಡುಬಂದಿರುತ್ತದೆ.

ಇ) ಸರ್ಕಾರ ಈ ಪ್ರದೇಶವನ್ನು ಎಪಿಡಮಿಕ್ ಪ್ರದೇಶವೆಂದು ಘೋಷಣೆ ಮಾಡಿರುವುದಿಲ್ಲ.

ಈ) ಕೇಂದ್ರ ಪುರಸ್ಕೃತ ಯೋಜನೆಯಡಿ ಎಂಡೋಮಿಕ್ ಪ್ರದೇಶವೆಂದು ಘೋಷಿಸುವ ಯೋಜನೆಯು 1992-93ನೇ ಸಾಲಿನಿಂದ ರದ್ದಾಗಿರುವುದರಿಂದ ಶಿಫಾರಸ್ಸು ಮಾಡಿರುವುದಿಲ್ಲ.

ದ್ವಿಚಕ್ರ ವಾಹನಗಳ ಕಳ್ಳತನವನ್ನು ತಡೆಗಟ್ಟುವ ಬಗ್ಗೆ

1997 - ಶ್ರೀ ಕುಂಬ್ಳೆ ಸುಂದರ್ ರಾವ್ (ಸುರತ್ಕಲ್) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಕಳೆದ ಐದು ವರ್ಷಗಳಲ್ಲಿ ಕಳವು ಆದ ದ್ವಿಚಕ್ರ ವಾಹನಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಪತ್ತೆಯಾದ ವಾಹನಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)*

ಆ) *ಇತ್ತೀಚಿನ ವರ್ಷಗಳಲ್ಲಿ ವಾಹನಗಳ ಕಳ್ಳತನದ ಸಂಖ್ಯೆಯು ವೃದ್ಧಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಆ ಬಗ್ಗೆ ತೆಗೆದುಕೊಂಡ ಕ್ರಮಗಳೇನು;*

ಇ) *ದ್ವಿಚಕ್ರ ವಾಹನಗಳು ನಗರ ಪ್ರದೇಶಗಳಲ್ಲಿನ ನಿಲುಗಡೆ ಸ್ಥಳಗಳಿಂದ ಮತ್ತು ಇತರ ಸ್ಥಳಗಳಿಂದ ಕಳವು ಆಗುತ್ತಿರುವುದನ್ನು ತಡೆಗಟ್ಟಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಮಂತ್ರಿಗಳು) :

ಅ) i) ಕಳುವಾಗಿರುವ ವಾಹಗಳ ಸಂಖ್ಯೆ 12,067

ii) ಪತ್ತೆಯಾಗಿರುವ ವಾಹನಗಳ ಸಂಖ್ಯೆ 3,571

ಜಿಲ್ಲಾವಾರು ಮಾಹಿತಿಯನ್ನು ಅನುಬಂಧ 'ಆ'ದಲ್ಲಿ ಲಗತ್ತಿಸಿದೆ.

ಆ) ಸ್ವಲ್ಪ ಮಟ್ಟಿಗೆ ವಾಹನಗಳ ಕಳ್ಳತನಗಳ ಹೆಚ್ಚಳ ಕಂಡು ಬಂದಿದೆ. ಇದನ್ನು ತಡೆಗಟ್ಟುವ ಕ್ರಮಗಳನ್ನು ಅನುಬಂಧ 'ಆ'ದಲ್ಲಿ ಲಗತ್ತಿಸಿದೆ.

ಇ) 'ಆ' ಪ್ರಶ್ನೆಗೆ ಉತ್ತರಿಸಿರುವುದರಿಂದ ಉದ್ಭವಿಸುವುದಿಲ್ಲ.

ಅನುಬಂಧ - ೮

		1990		1991		1992		1993		1994		1995 (31-8-95)	
		ಕಳವು	ಪತ್ತೆ	ಕಳವು	ಪತ್ತೆ	ಕಳವು	ಪತ್ತೆ	ಕಳವು	ಪತ್ತೆ	ಕಳವು	ಪತ್ತೆ	ಕಳವು	ಪತ್ತೆ
1.	ಬೆಂಗಳೂರು ನಗರ	874	360	1190	329	1492	291	1266	189	1406	380	1094	421
2.	ಮೈಸೂರು ನಗರ	188	62	257	55	293	89	236	74	163	73	107	36
3.	ಹುಬ್ಬಳ್ಳಿ - ಧಾರವಾಡ ನಗರ	59	23	59	20	64	28	53	18	73	24	58	22
4.	ಬೆಂಗಳೂರು ಜಿಲ್ಲೆ	18	12	36	16	21	12	31	19	38	17	35	11
5.	ತುಮಕೂರು	6	—	4	1	8	3	21	1	17	2	18	3
6.	ಕೋಲಾರ	11	2	26	7	8	4	24	4	30	14	19	7
7.	ಕೆ.ಜಿ.ಎಫ್	18	5	16	3	12	2	15	3	17	5	16	2
8.	ಮೈಸೂರು ಜಿಲ್ಲೆ	8	1	13	3	16	11	24	12	17	12	17	8
9.	ಮಂಡ್ಯ	16	7	18	12	17	7	45	33	36	20	36	23
10.	ಹಾಸನ	33	8	32	17	24	9	33	19	34	17	31	24
11.	ಕೊಡಗು	3	2	2	2	—	—	4	3	4	2	6	3
12.	ಚಿತ್ರದುರ್ಗ	23	2	53	9	56	13	60	11	52	12	48	12
13.	ಶಿವಮೊಗ್ಗ	36	4	45	9	26	6	40	9	47	22	30	13
14.	ಬಳ್ಳಾರಿ	24	9	11	2	29	8	24	9	64	14	44	14

15. ದಕ್ಷಿಣ ಕನ್ನಡ	56	30	76	37	73	29	86	36	107	57	68	26
16. ಚಿಕ್ಕಮಗಳೂರು	6	2	9	5	7	1	12	2	25	12	18	11
17. ಉತ್ತರ ಕನ್ನಡ	10	6	4	—	12	2	12	1	15	8	25	11
18. ಬೆಳಗಾಂ	54	18	26	9	32	4	31	7	68	14	51	17
19. ಬಿಜಾಪುರ	10	4	22	4	14	4	27	5	36	4	20	2
20. ಧಾರವಾಡ	1	—	3	—	12	11	6	2	6	4	8	4
21. ಗುಲ್ಬರ್ಗಾ	20	9	24	5	33	10	56	6	60	11	28	8
22. ಬೀದರ್	17	3	6	3	7	4	15	6	24	3	15	2
23. ರಾಯಚೂರು	22	8	10	3	23	5	24	5	33	7	24	2
24. ರೈಲ್ವೇಸ್ ಬೆಂಗಳೂರು	-	-	-	-	–	-	-	-	-	-	-	
ಒಟ್ಟು	**1513**	**577**	**1942**	**551**	**2279**	**553**	**2145**	**474**	**2372**	**734**	**1816**	**682**

ಅನುಬಂಧ - ಆ

ವಾಹನಗಳ ಕಳ್ಳತನವನ್ನು ತಡೆಗಟ್ಟಲು ಕೈಗೊಂಡ ಕ್ರಮಗಳು ಈ ಕೆಳಗಿನಂತಿವೆ :

1. ವಾಹನಗಳನ್ನು ನಿಗದಿಪಡಿಸಿದ ನಿಲುಗಡೆ ಸ್ಥಳದಲ್ಲಿಯೇ ನಿಲ್ಲಿಸಲು ಸೂಕ್ತ ಕ್ರಮ ಕೊಗೊಳ್ಳಲಾಗುತ್ತಿದೆ.
2. ಸದ್ರಿ ನಿಲುಗಡೆ ಸ್ಥಳಗಳಲ್ಲಿ ಮುನಸಿಪಾಲ್ಟಿ ಅಥವಾ ಕಾರ್ಪೋರೇಷನಗಳ ಮೂಲಕ ಟೋಕನ್ ವ್ಯವಸ್ಥೆಯನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
3. ಅಪರಾಧ ವಿಭಾಗದ ಕಾನಸ್ಟೇಬಲ್‌ಗಳು ನಾಗರಿಕ ವಸ್ತ್ರಗಳಲ್ಲಿ ಗೌಪ್ಯವಾಗಿ ಸಂಚರಿಸಿ ಸಾರ್ವಜನಿಕ ಸ್ಥಳಗಳಲ್ಲಿ ವಾಹನ ಕಳ್ಳತನ ಮಾಡುವವರ ಮೇಲೆ ನಿಗಾ ಇಟ್ಟು ಅವರ ಚಟುವಟಿಕೆಗಳನ್ನು ಗಮನಿಸುವುದಕ್ಕಾಗಿ ನೇಮಿಸಲಾಗುತ್ತಿದೆ.
4. ಕಳುವಾದ ವಾಹನಗಳನ್ನು ಪಡಿಯುವವರನ್ನು ಆಗಿಂದಾಗ್ಗೆ ತಪಾಸಣೆ ಮಾಡಲಾಗುತ್ತಿದೆ.
5. ರಾಜ್ಯದ ಹಾಗೂ ಗಡಿ ಪ್ರದೇಶದ ಸಿಬ್ಬಂದಿಗಳಿಗೆ ವಾಹನ ಕಳ್ಳತನಗಳ ಬಗ್ಗೆ ನಿಗಾ ವಹಿಸಿ ಗಮನಿಸುವಂತೆ ಎಚ್ಚರಿಸಲಾಗುತ್ತಿದೆ.
6. ತಮ್ಮ ವಾಹನಗಳ ಬಗ್ಗೆ ಎಚ್ಚರಿಕೆ ವಹಿಸಿ ಅವುಗಳಿಗೆ ಸೂಕ್ತ ಬೀಗದ ವ್ಯವಸ್ಥೆ ಮಾಡುವಂತೆ ವಾಹನಗಳ ಮಾಲೀಕರಿಗೆ ತಿಳಿಸುವ ಪ್ರಕಟಣೆಗಳನ್ನು ಹೊರಡಿಸಲಾಗುತ್ತಿದೆ.

ಕೆ.ಎಸ್.ಆರ್.ಟಿ.ಸಿ ಸಂಸ್ಥೆಗೆ ಹೊಸಬಸ್ಸಗಳನ್ನು ಖರೀದಿಸಲು ಧನ ಸಹಾಯ

1998 - ಶ್ರೀ ಆರ್. ಕೃಷ್ಣಪ್ಪ (ಜಯಮಹಲ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಇರತಕ್ಕ ಹಳೆಯ ಬಸಗಳ ಸಂಖ್ಯೆ ಎಷ್ಟು?

ಆ) ಈ ಹಳೆಯ ಬಸ್ಸುಗಳನ್ನು ಹೊಸ ಬಸ್ಸುಗಳಿಂದ ಬದಲಾಯಿಸಲು ಉದ್ದೇಶಿಸಲಾಗಿದೆಯೇ?

ಇ) ಹಾಗಿದ್ದಲ್ಲಿ ಇದಕ್ಕೆ ತಗಲುವ ವೆಚ್ಚ ಎಷ್ಟು?

ಈ) ಎಷ್ಟು ಹೊಸ ಬಸಗಳನ್ನು ಈ ಉದ್ದೇಶಕ್ಕಾಗಿ ಖರೀದಿಸಲಾಗುವುದು?

ಉ) ಇದಕ್ಕಾಗಿ ಒಂದನ್ನೇ ಹಂತದಲ್ಲಿ ಸಹಾಯಧನ ನೀಡಬೇಕೆಂದು ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಸರ್ಕಾರವನ್ನು ಕೋರಿದೆಯೇ?

ಊ) ಹಾಗಿದ್ದಲ್ಲಿ, ಸರ್ಕಾರ ಇದರ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ನಿಗಮದಲ್ಲಿ 1995-96ನೇ ಸಾಲಿನ ಕಾರ್ಯಯೋಜನೆಯ ಪ್ರಕಾರ 1076 ಹಳೆ ವಾಹನಗಳನ್ನು ಬದಲಾವಣೆಗಾಗಿ ಗುರ್ತಿಸಿದೆ.